Regd No. M. 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 30 ಸಂಚಿಕೆ 111] ಗುರುವಾರ 2—1—47 [ಬಿಡಿ ಪ್ರತಿ 3 ಪೈ

ಮಂತ್ರಿ ಪದವಿ ಬಿಡುವರೇ ?

ತಾತ್ಕಾಲಿಕ ಸಂಕಾರದ ಮಂತ್ರಿಗ ಅಧಿಕಾ ಬಿಡ ಬೇಕೋ ಬೆ ಡವೋ ಬುದು ತಾ॥ 5ರಲ್ಲಿ ನಡೆಯುವ ಎ.ಐ ಸಿ ಯಲ್ಲಿ ತೀರ್ಮಾನಿಸಲಾಗುವು ದು ತಿಳಿಯಬಂದಿದೆ.

4 ಗಂಟೆಗೊಂದು ಕೊಲೆ

ಈಜಿಪ್ಟಿನಲ್ಲಿ ಕಳೆದ ಒಂದು ವರ್ಷದ 2800 ಕೊಲೆಗಳಾಗಿವೆಯಂತೆ.

ಕ್ರಿಸ್‌ಮಸ್

ಬರ್ನಾರ್ಡ್‌ಷಾರವರು ಕ್ರಿಸ್‌ಮಸ್ ನ್ಯೂಸೆನ್ಸ್ ಅನ್ನು ತ್ತಾರೆ. 50 ವರ್ಷ ಗಳ ಹಿಂದೆ ಅವರ ಕ್ರಿಸ್ ಬಹಿಷ್ಕಾರ ಸಮಿತಿ ಸ್ಥಾಪಿಸಲು ಪ್ರಯತ್ನಿಸಿದರೆಂದು ಅದರಲ್ಲಿ ಇಲ್ಲಿನವರೇನೂ ಅವರೊಬ್ಬರೇ ಮೆಂಬರೆಂದೂ ಹೇಳಲಾಗಿದೆ.

ಯೂನಿಯರ್ಜಾಕ್ ತಪ್ಪಿತು

ಈಚೆಗೆ ನಡೆದ ಪಂಜಾಬು ವಿಶ್ವವಿದ್ಯಾಲಯದ ಕಾನ್ವೊಕೇಷನ್ನಿನ 72 ನೆ ಅಧಿವೇಶನ ಕಾಲದಲ್ಲಿ, ಯೂನಿಯರ್ಜಾಕ್ (ಬ್ರಿಟಿಷ್ ಪತಾಕೆ) ಹಾರಿಸುವುದನ್ನು ನಿಲ್ಲಿಸಲಾಯಿತು.

ಆಗ್ನಿಗೆ ಆಹುತಿ

ಡೊಹಾಡ್ ಡಿ 29— ಇಲ್ಲಿಯ 12 ಬಟ್ಟೆ ಅಂಗಡಿಗಳು ಅಗ್ನಿಗೆ ಆಹುತಿಯಾದುವು. ಸುಮಾರು 12 ಲಕ್ಷ ರೂಪಾಯಿ ನಷ್ಟ !

ಜಸ್ಟಿಸ್ ಪಾರ್ಟಿ

ಮದರಾಸು ಡಿ 31 — ಜಸ್ಟಿಸ್ ಪಾರ್ಟಿಯವರು ಭಾರತವು ' ಸೋಷಿಯಲಿಸ್ಟ್ ರಿಪಬ್ಲಿಕ್ ' ಆಗಿರುವುದನ್ನು ಬಯಸುವರು

ಭಾರತ ಸೈನ್ಯಾಧಿಕಾರಿ

ನವದೆಹಲಿ, ಡಿ 27 — ಜಪಾನಿನ 268 ನೇ ಭಾರತ ಕಾಲಾಳು ಪಡವ್ಯೂಹವನ್ನು ವಹಿಸಿಕೊಳ್ಳಲು ಸತ್ಯವಂತ ಮಲಣ್ಣ ನಾಗೋರ್ಶ ರವರು ಬಂದರು.

ಮುಯ್ಯಿಗೆ ಮುಯ್ಯಿ

ಲಂಡನ್ ಡಿ 30 — ಪ್ಯಾಲಿಸ್ಟೈನಿನ ಬ್ರಿಟಿಷ್ ಮೇಜರಿಗೆ ಜಡಿ ಹೊಡೆದು ಮುಯ್ಯಿ ತೀರಿಸಲು ಲಂಡನ್ನಿನ ಯಹೂದಿಗಳ ದೇವತಾ ಮಂದಿರಕ್ಕೆ ಇತ್ತರು.

ಮುಸ್ಲಿಂ ಲೀಗಿನ ದೆವ್ವದ ಸಂತಾನ

1 ಪಾಕಿಸ್ತಾನದ ಕೋರಿಕೆಯು ದೆವ್ವದ ಒಂದು ಮಗು.

2 ಎರಡು ರಾಜ್ಯಾಂಗ ನಿರ್ಮಾಣ ಸಭೆಗಳು ಏರ್ಪಡಬೇಕೆಂಬುದು ದೆವ್ವದ ಎರಡನೇ ಮಗು

3 ಈ ಎರಡನ್ನೂ ಬ್ರಿಟಿಷ್ ಸರಕಾರವು ಅಂಗೀಕರಿಸತಕ್ಕದ್ದು, ಹಿಂದೂ ಕಾಂಗ್ರೆಸ್ಸು ಒಪ್ಪಿಕೊಳ್ಳತಕ್ಕದ್ದು. ಹಾಗೆ ಮಾಡದಿದ್ದಲ್ಲಿ ದೇಶದಲ್ಲೆಲ್ಲಾ ಗಲಾಟೆಗಳು ಬಲವಂತವಾಗಿ ಹುಡುಗಿಯರಿಗೆ ನಿಕ್ಕಾ ಕಟ್ಟುವಿಕೆಯು ಅವರನ್ನು ಕೆಡಿಸುವಿಕೆಯು ಇತ್ಯಾದಿ ದುಷ್ಕೃತ್ಯಗಳು ತಪ್ಪುವದಿಲ್ಲವೆಂಬುದು ದೆವ್ವದ ಮೂರನೆಯ ಮಗು.

4 ಹಿಂದೂಸ್ಥಾನ್ ಪಾಕೀಸ್ತಾನಗಳಲ್ಲಿ ವೈನಾರಿಟಿ ಸಮಸ್ಯೆಗಳನ್ನು ಪೂರ್ತಿಯಾಗಿ ತಗ್ಗಿಸಲು ಪೂರ್ವ ಬಂಗಾಳ ಮತ್ತು ಬಿಹಾರಗಳಲ್ಲಿ ನಡೆದಂಥಾ ಘೋರ ಕೃತ್ಯಗಳು ನಡೆಯದಿರಲು ಹಾಗೆ ನಡೆಯುವದೆಂಬ ಭಯವನ್ನು ಹೋಗೆಬಡಿಸಲು ಜನರನ್ನು ಬಡಪಾಯಿಸುವದೇ ಪರಮೋಪಾಯವೆಂಬುದು ದೆವ್ವದ ನಾಲ್ಕನೆಯ ಮಗು.

5 ಮುಸ್ಲಿಂರನ್ನು ಬಿಟ್ಟು ಹಿಂದೂ ಕಾಂಗ್ರೆಸ್ಸು ರಾಜ್ಯಾಂಗ ಪ್ರಣಾಳಿಕೆಯನ್ನು ತಯಾರಿಸಿದಲ್ಲಿ ಅದು ಹಿಂದೂಸ್ಥಾನಕ್ಕೆ ಮಾತ್ರವೇ ಅನ್ವಯಿಸುವದಾಗಲಿ, ಪಾಕೀಸ್ತಾನಕ್ಕೆ ಅನ್ವಯಿಸುವದಿಲ್ಲವೆಂಬುದು ದೆವ್ವದ ಐದನೆಯ ಮಗು.

(ತ್ರಿ)

ನ್ಯಾಷನಲ್ ಗಾರ್ಡ್

ಗೋರಕಪುರ ಡಿ 30 — ಹಿಂದೂ ಮಹಾ ಸಭೆಯು ನ್ಯಾಷನಲ್ ಗಾರ್ಡನ್ನು ಸ್ಥಾಪಿಸಲು ತೀರ್ಮಾನಿಸಿದೆ.

ಇಂದಿನ ವರ್ತಮಾನ

ಬೆಂಗಳೂರು, ಜ 1 — ಹುಳಿತ ಮುಸುಕಿನ ಜೋಳದ ಹಿಟ್ಟನ್ನು ಕೊಡುವುದನ್ನು ನಿಲ್ಲಿಸಿ ಅದರ ಬದಲು ಅಕ್ಕಿ ನುಚ್ಚನ್ನೋ, ಬಿಳಿ ಜೋಳವನ್ನೇ ಕೊಡುವುದಾಗಿಯೂ ಶಿವರಾತ್ರಿ ವೇಳೆಗೆ ರಾತ್ರಿ ಕೊಡುವುದಾಗಿಯೂ ಮುಂದಿನ ವಾರದಿಂದ ಬೆಲ್ಲ ಸಂಬರಾಯಿ ನೂಡುವುದಾಗಿಯೂ ಆಹಾರಾಧಿಕಾರಿ ಶ್ರೀ ಗುರುದತ್ತರು ಬಿ ಕ್ಲಾಸ್ ಕಾರ್ಡುಳ್ಳ 12 ಮಂದಿ ಮಜೂರ ಪ್ರತಿನಿಧಿಗಳಿಗೆ ತಿಳಿಸಿದರು.

ನವದೆಹಲಿ, ಡಿ 31 — ಸ್ವಾತಂತ್ರ್ಯ ಬಂಡಾಯವಿನ್ನೂ ಪೂರ್ಣವಾಗಿಲ್ಲವಾಗಿಯೂ, ಹೋರಾಟದ ಮುಖ ಮಾತ್ರ ಬದಲಾವಣೆಯಾಗಿರುವುದಾಗಿಯೂ ಪಂ॥ ನೆಹರು ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್ಸಿನಲ್ಲಿ ಮಾಡಿದ ಭಾಷಣದಲ್ಲಿ ತಿಳಿಸಿದರು.

ಮದರಾಸು, ಜ 1 — ರಾಜ್ಯಾಂಗ ರಚನಾ ಸಭೆಯಲ್ಲಿ ಭಾಗವಹಿಸಿ, ಭಾರತ ಸ್ವಾತಂತ್ರ್ಯಕ್ಕೆ ಬೆಂಬಲವೀಯರಿ ಎಂದು ಒದಾಗಿ ಸರ್ ಅಲ್ಲಾಡಿ ಕೃಷ್ಣಸ್ವಾಮಯ್ಯರ್‌ರವರು ನರೇಂದ್ರರಲ್ಲಿ ಪ್ರಾರ್ಥಿಸಿಕೊಂಡಿದ್ದಾರೆ.

ಮೈಸೂರು, ಜ 1 — ಸಭೆ ಮೆರವಣಿಗೆ ಮುಂತಾದುವನ್ನು ಮೂರು ತಿಂಗಳ ಕಾಲ ಮೈಸೂರು ನಗರದಲ್ಲಿ ಪ್ರತಿಬಂಧಿಸಿ ಜಿಲ್ಲಾಧಿಕಾರಿಗಳು ಪ್ರಕಟಣೆ ಹೊರಡಿಸಿದ್ದಾರೆ.

ಸಾದರ ಸ್ವೀಕಾರ

ನಂಜನಗೂಡಿನ ಶ್ರೀಮದ್ವೈದ್ಯಶಾಲಾದವರೂ ಮೈಸೂರಿನ ಕಾಂತ್‌ರಾಜ್ ಕಂಪೆನಿಯವರೂ ಕೊಡಗು ಪ್ರಕಾಶಕರೂ ತ್ರಿಲಿಂಗ ಪ್ರಕಾಶಕರೂ ಕಳುಹಿಸಿರುವ ಈ ವರ್ಷದ ಅಂದವಾದ ಕ್ಯಾಲೆಂಡರುಗಳನ್ನು ವಂದನಾಪೂರ್ವಕವಾಗಿ ಸ್ವೀಕರಿಸಿದ್ದೇವೆ.

ಆಟಂಬಾಂಬು ಹಾಕಲು ತರಬೇತೆ ?

ವಾಷಿಂಗ್‌ಟನ್ ಡಿ 31 — ಇಂಗ್ಲೆಂಡು ಮತ್ತೆ ಅಮೇರಿಕಾದ ವಿಮಾನದಳಗಳಲ್ಲೂ ಯುದ್ಧಕಾಲದಲ್ಲಿಂ ಸಹಕಾರವನ್ನು ಶಾಂತಿ ಕಾಲವನ್ನು ಮುಂದೆವರಿಸುವ ತೀರ್ಮಾನವಾಗಿದೆ. ಫ್ರಾಯಿಶಃ ಆರ್ ಎ. ಎಫ್‌ನವರು ಬಾಂಬು ಹಾಕುವ ವಿಷಯದಲ್ಲೂ ತರಬೇತು ಪಡೆಯಬಹುದೆಂದು ಹೇಳಲಾಗಿದೆ.

೧೨೦೦೦೦೦೦೦ ಪೌಂಡು ಸಾಲ

ಲಂಡನ್ ಜ 1_ಭಾರತ ಅಂಡರ್ ಸೆಕ್ರೆಟರಿಯವರಾದ ವಿ॥ ಹೆಂಡರ್‌ಸನ್ನರು ಪ್ರಿವಿಕೌನ್ಸಿಲ್ಲಿಗೆ ನೇಮಿಸಲ್ಪಟ್ಟರು. ಇವರು ಸಧ್ಯ ಭಾರತಕ್ಕೆ ಬಂದು ತಾತ್ಕಾಲಿಕ ಸರಕಾರದೊಡನೆ ಬ್ರಿಟನ್ನಿನ ೧೨೦೦೦೦೦೦೦ ಪೌಂಡು ಸಾಲದ ಮತ್ತಿತರ ವಿಷಯ ಚರ್ಚಿಸುವರು.

ಗ್ರೀಸಿನಲ್ಲಿ ಭೀಕರ ಕದನ

ಅಥೆನ್ಸ್ ಡಿ 31— ಗೆರಿಲಾಗಳಿಂದ ಹಿಡಿಯಲ್ಪಟ್ಟಿರುವ ಹಿಪಾತಿ ಎಂಬ ಅಥೆನ್ಸಿಗೆ 100 ಮೈಲಿ ದೂರದ ನಗರವನ್ನು ವಶಪಡಿಸಿಕೊಳ್ಳಲು ಗ್ರೀಸ್ ಸರಕಾವು ಸೈನ್ಯ ಕಳಿಸಿದೆ. ಅಲ್ಲಿ ಭೀಕರ ಕದನ ನಡೆಯುತ್ತಿದೆ.

ಉಪ್ಪಿನ ತೆರಿಗೆ

ಕರಾಚಿ ಡಿ 31— ಈ ದಿನ ನಡೆದ ಅಖಿಲ ಭಾರತ ಆರ್ಥಿಕ ಸಮ್ಮೇಳನದಲ್ಲಿ ಉಪ್ಪಿನ ತೆರಿಗೆ ವಜಾ ಮಾಡುವ ವಿಚಾರದಲ್ಲಿ ಅನೇಕ ಪ್ರತಿನಿಧಿಗಳು ತಮ್ಮ ಸಮ್ಮತಿಯನ್ನು ಸೂಚಿಸಿದರು.

ಜ॥ ಸ್ಮಟ್ಸರು

ದಕ್ಷಿಣ ಆಫ್ರಿಕಾದ ಮುಖ್ಯಮಂತ್ರಿ ಜ॥ ಸ್ಮಟ್ಸರಿಗೆ ಹೊಸ ವರ್ಷದಲ್ಲಿ ಆರ್ಡರ್ ಆಫ್ ಮೆರಿಟ್ ಬಿರುದು ದೊರೆತಿದೆ.

STOP PRESS

ಮುಷ್ಕರ ನಿಂತಿತು

ಮಂಡ್ಯ ಜ 2 — ನಿನ್ನೆ ದಿವಸದಿಂದ ನಡೆಯಬೇಕಾಗಿದ್ದ ಮೈಸೂರು ಸಕ್ಕರೆ ಕಾರ್ಖಾನೆ ನೌಕರರ ಮಹಾ ಮುಷ್ಕರ ನಿಂತಿತು. ಕಾರ್ಖಾನೆ ಎಡಳಿತ ವರ್ಗ ಸಂಘದೊಡನೆ ಸಂಧಾನ ನಡೆಸಿ ತೀರ್ಮಾನಕ್ಕೆ ಬಂದವು. ಕೆಲಸದಿಂದ ವಜಾ ಮಾಡಲ್ಪಟ್ಟ ಕಾಳಯ್ಯನನ್ನು ಪುನಃ ಕೆಲಸಕ್ಕೆ ಸೇರಿಸಿಕೊಳ್ಳುವ ವಿಷಯವನ್ನು ಪಂಚಾಯಿತಿಗೆ ಬಿಡಲಾಗುವುದು. (ಹೆಚ್ಚು ವಿವರ ನಾಳೆ.)

ದ್ವಾರಕಾ ಜಗದ್ಗುರು ಮಹಾರಾಜರು

(ಸ್ವಂ. ಸು. ತಂತಿ)

ದ್ವಾರಕಾ ಡಿ 31— ದ್ವಾರಕಾ ಶಾರದಾ ಪೀಠದ ಶ್ರೀ ಜಗದ್ಗುರು ಶಂಕರಾಚಾರ್ಯಸ್ವಾಮಿಗಳು ಶ್ರೀ ಅಭಿನವ ಸಚ್ಚಿದಾನಂದ ತೀರ್ಥ ಮಹಾರಾಜರವರು ರಾಜಕೋಟೆಯಲ್ಲಿ ಉಜ್ವಲಧಾರ್ಮಿಕ ಮತ್ತು ಆಧ್ಯಾತ್ಮಿಕ ಸಪ್ತಾಹಿಕ ಪತ್ರಿಕೆಯಾದ ' ನವಭಾರತಿ ' ಯ ಉದ್ಘಾಟನೋತ್ಸವನ್ನು ನೆರವೇರಿಸಿ ಇಲ್ಲಿಗೆ ಸನ್ನೆ ದಯಮಾಡಿಸಿದರು. ಸನ್ನೆ ಒಂದು ಭಾರಿ ಸಾರ್ವಜನಿಕ ಸಭೆಯು ಶ್ರೀಗಳವರ ಅಧ್ಯಕ್ಷತೆಯಲ್ಲಿ ನಡೆದು ದ್ವಾರಕಾಧೀಶ ವಿಶ್ವವಿದ್ಯಾಲಯದ ವಿಚಾರದಲ್ಲಿ ವ್ರಮುಖರನೇಕರಿಂದ ಭಾಷಣವಾದನಂತರ ಮೂರು ತರಾವುಗಳು ಮಂಜೂರಾದವು. ನಂತರ ಶ್ರೀಗಳವರು ಹಿಂದೂಮತದ, ಹಿಂದೂ ಸಂಸ್ಕೃತಿಯ ಮಹತ್ವದ ವಿಚಾರದಲ್ಲೂ ಅಮೋಘ ಭಾಷಣ ಮಾಡಿ ಪುರಾತನ ಭಾರತ ಧರ್ಮ ಸಂಸ್ಕೃತಿ ವಿದ್ಯಾ ಪ್ರಚಾರಕ್ಕೆ ದ್ವಾರಕಾಧೀಶ ವಿಶ್ವವಿದ್ಯಾಲಯವೂ ನವಭಾರತಿ ಪತ್ರಿಕೆಯೂ ಎಷ್ಟು ಅವಶ್ಯಕವಾಗಿರುವುದೆಂಬುದನ್ನು ವಿವರಿಸಿದರು. ಶ್ರೀಗಳವರು ಜನವರಿ 1 ರಲ್ಲಿ ಪರ್ಬತಗೆ ಪ್ರಯಾಣ ಬೆಳೆಸುವರು.

ಮೈಸೂರಿಂದ ರಾಷ್ಟ್ರ ಕೂಟಕ್ಕೆ

ಸರ್ ಆರ್ಕಾಟರು ಮೈಸೂರು ದೇಶಕ್ಕೆ ಕಾಲಿಟ್ಟಾಗಲಿಂದ ರಾಷ್ಟ್ರಕೂಟಕ್ಕೆ ಮೈಸೂರಿನಿಂದ ಕಳುಹಿಸಬೇಕಾಗಿರುವ ಪ್ರತಿನಿಧಿಗಳು ' ಯಾರು ಯಾರು ' ಎಂಬ ವಿಚಾರ ಮಾಡುತ್ತಿದ್ದಾರೆಂದೇ ಎಲ್ಲರೂ ನಂಬಿದ್ದಾರೆ. ಹೀಗೆ ತಾವು ಆಲೋಚನೆ ಮಾಡುತ್ತಿರುವುದಾಗಿ ಪತ್ರಿಕಾ ಗೋಷ್ಠಿಗಳಲ್ಲಿ ಸಾರ್ವಜನಿಕ ಸಭಾ ಸ್ವಾಗತ ಸತ್ಕಾರ ಸನ್ನಿವೇಶಗಳಲ್ಲಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಹೇಳಿದ್ದಾರೆ. ಇದುವರೆಗೆ ಆಲೋಚನೆ ಕಾರ್ಯರೂಪ ತಾಳಲಿಲ್ಲ. ಈ ಸಾವಕಾಶದ ಅರ್ಥವೇನು ? ಸರ್ ಸಿ. ಪಿ. ಗಳು ಮಾಡಲೆಂದು ಸರ್ ಆರ್ಕಾಟರೂ, ಸರ್ ಆರ್ಕಾಟರು ಏನೂ ಮಾಡುವರೋ ನೋಡೋಣವೆಂದು ಸರ್ ಮಿರ್ಜಾರವರೂ ಇವರೆಲ್ಲ ಏನು ಮಾಡುವರೊ ಹಾಗೆ ಮಾಡೋಣವೆಂದು ಉಳಿದ ಸುಮಂತ್ರರೂ ಕಾಲಹಾಕುತ್ತಿರುವರೇನು ? ಹಾಗಾದ್ದರೆ ಈ ವರ್ತನವು ಮೈಗೊಳ್ಳೆಯದಲ್ಲ. ಪ್ರಜೆಗಳ ಪಹನೆಗೂ ಒಂದು ಮಿತಿಯಿದೆ. (ವಿ. ಕ.

ಸತ್ಯವಾದಿ
ದಿನ ಪತ್ರಿಕೆ. ತಿಂಗಳಿಗೆ ಆರಾಣೆ

ಸೇನೆಯ ' ಸುಪ್ಪಳಿಗೆ ಕೇಂದ್ರ ' ಎ ಟಿ ಎಸ್. ಪರ್ಸನಲ್ ಮಕ್ಕಳಿಗಾಗಿ ಗೊಂಬೆ ತಯಾರಿಸುತ್ತಿರುವರು

ಸುಖ ಆರೋಗ್ಯ ಆನಂದದಾಯಕ ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಸ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

At Opera ☰ 2nd Houseful Week

ಸೂರಿಬಾಬು, ರಾಜ್ಯಂ, ಸೌದಾಮಿನಿ, ಲಿಂಗಮೂರ್ತಿ, ಉಮಾಮಹೇಶ್ವರರಾವ್ ಪಾತ್ರವಹಿಸಿರುವ

ನಾರದ - ನಾರದಿ

[ತೆಲಗು]

At Ranjit—— 2nd Glorious Week

ನೂರ್‌ಜಹಾ — ಸುರೇಂದ್ರ — ಜಹರ್ ರಾಜಾ — ಸುರಿಯ ಪಾತ್ರವಹಿಸಿರುವ

ಅನ್ನೋಲ್ ಘುಡಿ

Edited, Printed and Published by M. S Krishna Rao at the Satyavadi Press ChamarajAgrahar, Mysore.

For Quality Printing
L. N. Pres
Sriramp et, MY